(SRI H. M. CHANNABASAPPA)

(b) Name of taluk	No. of tanks restored	
	Major	Minor
Hassan ...	54	74
Alur ...	15	45
Saklespur ...	13	34
Belur ...	43	35
Channaraya-patna.	39	10
Arsikere ...	30	3
Holenarasipur	15	62
Arkalgud ...	8	86
Total ...	217	349

Rock-Slimes in K.G.F.

*Q.—269. Sri M. C. NARASIMHAN (Kolar Gold Fields).—

Will the Government be pleased to state :—

(a whether they are aware that rock slimes in Kolar Gold Fields can be put to industrial use ;

(b) the step taken by the Government for the proper use of the said rock slimes ;

(c) whether they would place the materials or information collected in the matter, if any, before the House for information ?

A.—Sri B. D. JATTI (Chief Minister).—

(a) The possibilities of making industrial use of the rock slimes are still in the stage of investigation.

(b) A Technical Committee has been constituted by the Kolar Gold Mining Undertakings to investigate and report on the possible uses of the tailings.

(c) An interim report has been submitted by the Technical Committee in January 1959 but until the experimental work in progress is completed, specific recommendations for the use of tailings for industrial purposes cannot be put forward and therefore it is considered that no useful purpose will be served by placing the interim report before the House.

Member's Representation

Sri K. PUTTASWAMY (Mysore).—Mr. Speaker, I am only asking for some more light. During the question time today, and yesterday you were pleased to remark that the parties should take control of the members. I do not think any members of this House can exercise any portion of the responsibility of the Speaker. Therefore I would like to ask for some clarification on that point. Because I am immediately concerned with that, I want to know whether I can take control of any of the members on my side.

Sri B. D. JATTI (Chief Minister).—It is the Speaker who can control and not the Leader of the Party (*Laughter*).

Mr. SPEAKER.—Hon'ble Members are under a wrong impression. It is the Speaker who will have charge of the discipline of the House. But at the same time it is also the duty of the parties to co-operate with the Chair. To that extent they must also see that their members are behaving as properly as they are expected to in this House.

Sri B. N. BORANNA GOWDA (Belur).—We are not sitting here as members of a party.

Mr. SPEAKER.—You are sitting both as a member of the party and also a member of the House.

Sri K. S. SURYANARAYANA RAO (Mysore City).—The Speaker was pleased to observe during question hour when Sri Muniappa was on his legs to raise a point of order, even without giving him an opportunity to say what he wanted to say by way of a point of order, that there was no point of order.

Mr. SPEAKER.—I only gave my ruling with respect to Sri Muniappa. I only said there could not be a point of order. I want that it should not be discussed like this.

Sri U. M. M. DAPPA (Chamarajanagar).—It is a ruling from the Chair. It cannot be challenged.

Mr. SPEAKER.—As Sri U. M. Madappa put it, it is a ruling from the Chair and it cannot be challenged.

Sri K. S. SURYANARAYANA RAO.—I know the rules also. The point is this. The courtesy that a member would expect from the Chair is at least

an audience to be given in this House, to say what he wants to by way of a point of order.

Mr. SPEAKER.—I know the courtesy myself. I need not be told about that. I only stated that the member could not raise a point of order in a vacuum. To draw inferences would be uncharitable.

Sri G. VENKATAI GOWDA (Palaiyam).- Suppose something happens fifteen minutes after I spoke ; am I not entitled to raise a point of order ?

Mr. SPEAKER.—I am not here to discuss an hypothetical question.

Sri H. M. CHANNABASAPPA (Minister for Public Works and Electricity).—What is meant by 'vacuum'?

Mr. SPEAKER.—There was no subject before the House. Sri Bomme Gowda had only stood up and not put the question.

ಶ್ರೀ ಎ. ಮುನಿಯಪ್ಪ (ಚಿಕ್ಕಬಳ್ಳಾಪುರ).—ತಮ್ಮ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಮಾಡಿ ಈ ಸಭೆಯ ನಡವಳಿಕೆಗಳು ಹೀಗೀಗೇ ನಡೆಯಬೇಕೆಂದು ಗೊತ್ತಾದ ನಂತರ ಈ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅದರಂತೆ ತೀರ್ಮಾನ ಕೊಟ್ಟಿದ್ದಿರಿ. ಅದರ ಪ್ರಕಾರ ಯಾರಾದರೂ ಕ್ರಿಯಾಲೋಪ ಎತ್ತಿದರೆ ಅದಕ್ಕೆ ತಾವು ಮುನ್ನಣಿ ಕೊಟ್ಟು ಸರ್ಕಾರದಿಂದ ಉತ್ತರ ಕೊಡಿಸುವುದು ತಮ್ಮ ಕರ್ತವ್ಯ. ಅದರಮೇಲೆ ನಾನು ಕ್ರಿಯಾಲೋಪ ಎತ್ತಿದ ತಕ್ಷಣ ಅದರ ರೂಪ ತಮಗೆ ಗೊತ್ತಿಲ್ಲದೆ ಅದರಮೇಲೆ 'No point of order' ಎಂದು ಹೇಳುವಾಗ ನೀವು ಮಾಡಿದ ಆರ್ಡರಿಗೆ ನೀವೇ ಬೆಲೆಕೊಡದೇ ಇದ್ದರೆ ಏನು ಮಾಡುವುದು ?

ಅಧ್ಯಕ್ಷರು.—ಕ್ರಿಯಾಲೋಪ ಆ ರೀತಿ ಬರುವುದಿಲ್ಲ. ನಾನು ಹೇಳುವುದಿಷ್ಟೆ. ಹಿಂದಿನ ಪ್ರಶ್ನೆ ಮುಗಿದಿತ್ತು. ಮುಂದಿನ ಪ್ರಶ್ನೆಯನ್ನು ಕರೆದಿದ್ದೆ. ಶ್ರೀ ಬೊಮ್ಮೇಗೌಡರು ಪ್ರಶ್ನೆ ಹಾಕುತ್ತಿದ್ದರು. ಅದ್ದರಿಂದ ಆ ಪ್ರಶ್ನೆಗೆ ಸಂಬಂಧಿಸಿದಂತೆ ಕ್ರಿಯಾಲೋಪ ಉಂಟಾಗುವುದಿಲ್ಲ.

BUDGET ESTIMATES FOR 1959-60—DEMANDS FOR GRANTS

Demand No. 20—Education.

37. *Education.*

(Discussion Continued).

ಶ್ರೀ ವೈ. ವೀರಪ್ಪ (ಹೊಳೇನರಸೀಪುರ).—ಮಾನ್ಯ ಅಧ್ಯಕ್ಷರೇ, ವಿದ್ಯಾಭ್ಯಾಸದ ಬಾಬಿಗಾಗಿ 11 ಕೋಟಿ ಚಿಲ್ಲರೆ ಹಣವನ್ನು ಕೊಡಬೇಕೆಂಬ ಬಗ್ಗೆ ನಾವು ಈಗ ಇಲ್ಲಿ ಚರ್ಚೆ ಮಾಡಬೇಕಾಗಿದೆ, ನಿನ್ನೆ ದಿವಸ ಈ ಬಾಬಿನ ಬಗ್ಗೆ ಮಾತನಾಡಿದ ನನ್ನ ಅನೇಕ ಸ್ನೇಹಿತರು ತಮ್ಮ ತಮ್ಮ ಅಭಿಪ್ರಾಯಗಳನ್ನು ಪ್ರತಿಬಿಂಬಿಸಿದ್ದಾರೆ. ಎಲ್ಲಾ ಇಲಾಖೆಗಳನ್ನು ತೆಗೆದು ಕೊಂಡರೆ, ಸಮಾಜ, ದಲ್ಲಿ ದೇಶಾಭಿವೃದ್ಧಿಯಾಗುವ ಒಂದು ಗುರಿಯನ್ನು ನಾವು ನೋಡಿದರೆ ಹೆಚ್ಚಿನ ಮಹತ್ವ ಮತ್ತು ಕಿಮ್ಮತ್ತನ್ನು ವಿದ್ಯಾಭ್ಯಾಸದ ಇಲಾಖೆಗೆ ಕೊಡಬೇಕೆಂಬುದು ಪ್ರಾಚೀನ ಕಾಲದಿಂದ ಬಂದುವಾಗಿದೆ. ಈಗ ನಮ್ಮಲ್ಲಿ ಸ್ವಾತಂತ್ರ್ಯವನ್ನು ಗಳಿಸಿದಲಾಗಾಯಿತು ಈ ಬಾಬಿಗೆ ಎಷ್ಟೋ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಎರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಯನ್ನು ಮುಗಿಸುತ್ತಿದ್ದೇವೆ. ಈ ಬಾಬಿಗೆ ಕೋಟ್ಯಾಂತರ ರೂಪಾಯಿಗಳನ್ನು ಈಗಾಗಲೇ ಖರ್ಚುಮಾಡಿದ್ದೇವೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಟ್ಟು 4,800 ಕೋಟಿ ರೂಪಾಯಿಗಳನ್ನು ಖರ್ಚುಮಾಡುವ ಪೈಕಿ 325 ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸ ಕ್ಕಾಗಿ ಮಾತ್ರ ಉಪಯೋಗಿಸಬೇಕೆಂದು ಲೋಕಸಭೆ ಯವರು ವಿಚಾರ ದೃಷ್ಟಿಯಿಂದ ಈ ಯೋಜನೆಯಲ್ಲಿ ಅಳವಡಿಸಿದ್ದಾರೆ. ಆದರೆ ಈ ಬಗ್ಗೆ ಕಾರ್ಯಸಾಧನೆ ಗಳು ಎಷ್ಟರಮಟ್ಟಿಗೆ ನಡೆದಿವೆ ಎಂಬುದನ್ನು ನೋಡಿದರೆ ನಿಜವಾಗಿ ನಿರಾಶಾದಾಯಕವಾಗಿ ಕಾರ್ಯಗಳಾಗಿವೆ ಎಂದು ಹೇಳಿದರೆ ಏನೂ ತಪ್ಪಾಗಲಾರದು. ಉದಾಹರಣೆಗೆ ಸಮಾಜ ಮುಂದೆ ಉದ್ಧಾರವಾಗಬೇಕಾದರೆ, ಸುಭದ್ರವಾಗಿ ಬೆಳೆಯಬೇಕಾದರೆ ವಿದ್ಯಾಭ್ಯಾಸದ ಇಲಾಖೆಗೆ ಸರ್ಕಾರ ಕೊಡುತ್ತಿರುವ ಗಮನ, ಆಡಳಿತ ನಡೆಸುತ್ತಿರುವ ರೀತಿ ನೀತಿಗಳು ಎಷ್ಟರ ಮಟ್ಟಿಗೆ ಫಲಕಾರಿಯಾಗುತ್ತಿವೆ ಎನ್ನುವುದನ್ನು ಪರಿಶೀಲಿಸಿನೋಡಿದರೆ, ನಾವು ನಿರೀಕ್ಷಿಸಿದಷ್ಟು ಪ್ರತಿ ಫಲ ದೊರಕಲಲ್ಲವೆಂದು ನನಗೆ ಕಾಣುತ್ತದೆ. ಮುಂದೆ ಒಂದು ದೊಡ್ಡ ಸಮಾಜವನ್ನು ಕಟ್ಟಬೇಕು, ನಮ್ಮ ದೇಶವನ್ನು ಒಂದು ಬಲಿಷ್ಠವಾದ ರಾಷ್ಟ್ರವನ್ನಾಗಿ ಮಾಡಬೇಕೆಂಬುದು ನಮ್ಮೆಲ್ಲರ ತೀವ್ರ ಆಶೆಯಾಗಿದೆ. ಇನ್ನು ನರ್ಸರಿ ಸ್ಕೂಲ್ ಮತ್ತು ಪ್ರೈಮರಿ ಸ್ಕೂಲ್ ಗಳ ಬಗ್ಗೆ ಮಹತ್ತರ ಕಿಮ್ಮತ್ತು ಕೊಡಬೇಕು. ಅದನ್ನು ಪರಿಶೀಲನೆ ಮಾಡಿದರೆ ಈಗ ನಮ್ಮಲ್ಲರತಕ್ಕ ಪ್ರಿ-ಪ್ರೈಮರಿ ಅಥವ ನರ್ಸರಿ ಸ್ಕೂಲುಗಳ ಚಟುವಟಿಕೆಗಳು ಅಷ್ಟು ಆಶಾದಾಯಕವಾಗಿಲ್ಲ, ಅಮೇರಿಕಾ ದೇಶದಲ್ಲಿ 3 ವರ್ಷಗಳಿಂದ 5 ವರ್ಷಗಳವರೆಗೆ ಒಂದು ಕಡಾಯವಾದ ಶಿಕ್ಷಣವನ್ನು ರಾಷ್ಟ್ರದ ಮುಂದಿನ ಜನಾಂಗವನ್ನು ರೂಪಿಸಬೇಕೆಂಬ ದೃಷ್ಟಿಯಿಂದ ಮುಂದಿನ ಗುರಿ ಏನಿದೆ ಎಂಬುದನ್ನು ತಿಳಿಯಲು ಮತ್ತು ಅದು ಯಾವರೀತಿ ಅಭಿವೃದ್ಧಿಯಾಗ ಬೇಕು ಎಂಬ ಮುಖ್ಯಾಂಶವನ್ನು ಗಮನದಲ್ಲಿಟ್ಟು ಕೊಂಡು ಪ್ರಥಮ ರೀತಿಯಲ್ಲಿ ಕೊಡುತ್ತಾರೆ. ಈಗ್ಗೆ ಹತ್ತಾರು ವರ್ಷಗಳು ಉರುಳಿದ್ದರೂ ಈ ಕಾಲದಲ್ಲಲ್ಲಿ ಅಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದರೂ ನಿರೀಕ್ಷಿಸಿದಷ್ಟು ಪ್ರತಿಫಲ ದೊರಕಲಲ್ಲ. ಅಂದಮೇಲೆ ನಾವು ಎಷ್ಟು ಹೆಚ್ಚಿನ ಮಟ್ಟದಲ್ಲಿ ಈ ಬಾಬಿಗೆ ಖರ್ಚುಮಾಡಿದರೆ ನಮಗೆ ಅದರಿಂದೇನು ಫಲ ದೊರಕುತ್ತದೆ ಎಂಬುದನ್ನು ಪರಿಶೀಲಿಸಬೇಕು. ನಾವು ಕೇವಲ ಆಸ್ತಿಕವಾಗಿ ಮುದಿನ ವರುಷ ನರಿಪಾಡುತ್ತೇವೆ ಎಂಬ ದೃಷ್ಟಿಯಿಂದ ಈ ಮಾಮೂಲಾದ ಡಿಮ್ಯಾಂಡನ್ನು ಈಗಲೂ ಚರ್ಚೆಮಾಡುತ್ತಿದ್ದೇವೆ. ಮುಖ್ಯವಾಗಿ ಸರ್ಕಾರದವರಿಗೆ ಈಗಿನ ಬಾಲಕ ಬಾಲಕಿಯರಲ್ಲಿ ವಿದ್ಯಾಭ್ಯಾಸ ಒಂದು ಹೆಚ್ಚಿನ ಮಟ್ಟದಲ್ಲಿ ಬೆಳೆಯಲಿ ಎಂಬ ಇಚ್ಛೆ ಇರಬೇಕು.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಮಾನ್ಯ ಸದಸ್ಯರು ವಿದ್ಯಾಭ್ಯಾಸದ ಡಿಮ್ಯಾಂಡ್ ಮೇಲೆ ಮಾತನಾಡುವಾಗ ವಿದ್ಯಾಮಂತ್ರಿಗಳು ಯಾವುದೋ ಫೈಲುಗಳನ್ನು ನೋಡಬಹುದೇ ?

ಅಧ್ಯಕ್ಷರು.—ಮಂತ್ರಿಗಳು ಸದಸ್ಯರ ಸಲಹೆಗಳನ್ನು ಬರೆದುಕೊಳ್ಳುತ್ತಿದ್ದಾರೆ. ಫೈಲುಗಳನ್ನೇನೂ ನೋಡುತ್ತಿಲ್ಲ.